**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ.**

ಸಿ.ಸಿ. ನಂ– 902/2022

ಡಿ ಡಬ್ಲೂ–1

ದಿನಾಂಕಃ 25–06–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. ಆರ ಆರ ಕೆ ಆರೋಪಿ ಪರ ವಕೀಲರಿಂದ–**

ನನಗೆ ಫಿರ್ಯಾದಿ ಸ್ನೇಹಿತ. ನಾನು ಫಿರ್ಯಾದಿಗೆ ರೂ. 9,84,000/–ಹಣ ಕೊಡುವ ವ್ಯವಹಾರ ಇಲ್ಲ. ಫಿರ್ಯಾದಿ ಒಕ್ಕಲತನ ಮಾಡುತ್ತಾರೆ. ನನಗೆ ಹಣದ ಅವಶ್ಯಕತೆ ಇರಲಿಲ್ಲ. ನನ್ನ ತಾಯಿ ಫಿರ್ಯಾದಿ ಕಡೆಯಿಂದ ರೂ. 5 ಲಕ್ಷ ಹಣ ಸಾಲ ಪಡೆದಿದ್ದರು ಅದರ ಭದ್ರತೆಗಾಗಿ ನಾನು ಮೂರು ಖಾಲಿ ಚೆಕ್ಕನ್ನು ನೀಡಿದ್ದೆ. ಫಿರ್ಯಾದಿ 5 ಲಕ್ಷ ಹಣವನ್ನು ನನ್ನ ತಾಯಿ ಬಾಪೂಜಿ ಬ್ಯಾಂಕ ಖಾತೆಗೆ ಹಾಕಿದ್ದರು. ನನ್ನ ತಾಯಿ ಒಂದು ವರ್ಷದ ಬಡ್ಡಿಯನ್ನು ನೀಡಿದ್ದರು ನಂರ ನನ್ನ ತಾಯಿ ಮರಣ ಹೊಂದಿದರು. ರೂ. 6,20,000/– ಹಣವನ್ನು ಫಿರ್ಯಾದಿಗೆ ಹಿಂದುರುಗಿಸಿರುತ್ತೇನೆ. ರೂ. 1,20,000/– ಹಣವನ್ನು ಬಡ್ಡಿಯಾಗಿ ನೀಡಿರುತ್ತೇನೆ. ರೂ. 6,10,000/– ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಫಿರ್ಯಾದಿ ಹಣ ಮುಟ್ಟಿದೆ ಎಂದು ರೂ. 50/– ಬಾಂಡ ಮೇಲೆ ಬರೆದು ಕೊಟ್ಟಿದ್ದ. ಅದರಲ್ಲಿ ವಕೀಲರು ಊರಲ್ಲಿ ಇಲ್ಲ ಅವರು ಬಂದ ನಂತರ ಚೆಕ್ಕನ್ನು ಮರಳಿ ನೀಡುತ್ತೇನೆ ಎಂದು ಬರೆದಿದ್ದರು. ರೂ. 10,000/– ಬಡ್ಡಿ ಹಣವನ್ನು ಬಿಡಿ ಎಂದು ಹೇಳಿದಕ್ಕೆ ಫಿರ್ಯಾದಿ ಬಾಂಡ ಮೇಲೆ ಸಹಿ ಮಾಡಲು ನಿರಾಕರಿಸಿರಿದ್ದರು. ಅದಕ್ಕೆ ನಾನು ರೂ. 10,000/– ಹಣವನ್ನು ಫಿರ್ಯಾದಿಯ ಹೆಂಡತಿಯ ಖಾತೆಗೆ ಪೋನ ಪೇ ಮಾಡಿರುತ್ತೇನೆ. ದಿಃ 02–05–2022 ರಂದು ಬಾಂಡ ಬರೆದುಕೊಟ್ಟಿದ್ದರು ಅದೇ ದಿನ ನಾನು ರೂ. 10,000/– ಹಣವನ್ನು ಪೋನ ಪೇ ಮಾಡಿರುತ್ತೇನೆ. ಬಾಂಡ ಬರೆಯುವ ಕಾಲಕ್ಕೆ ಅಲ್ಲಿ ಬಿ ಎಸ ಸಿಂಧೂರ, ಮಂಜು ಬೋವಿ, ಸುಭಾಷ ಮಲಕಪ್ಪನವರು ಮತ್ತು ಬಸಪ್ಪ ಕತ್ತಿ ಇದ್ದರು. ಬಾಂಡಗೆ ಫಿರ್ಯಾದಿದಾರ ತನ್ನ ಪೋಟೋ ಅಂಟಿಸಿ ಸಹಿ ಮಾಡಿದ. ಅದನ್ನು ಲಾಡ ವಕೀಲರ ನೋಟರೈಸ್ಡ ಮಾಡಿಸಲಾಯಿತು. ಈ ವ್ಯವಹಾರ ಆಗುವ ಸಂದರ್ಭದಲ್ಲಿ ನಾನು ವಿಡಿಯೋವನ್ನು ಮಾಡಿದ್ದೆ. ಫಿರ್ಯಾದಿ ಈ ಹಿಂದೆ ನಾಲ್ಕೈದು ಜನರಿಗೆ ಮೋಸ ಮಾಡಿದ್ದ, ನನಗೂ ಮೋಸ ಮಾಡಬಹುದು ಎಂದು ಯೋಚಿಸಿ ವಿಡಿಯೋ ಮಾಡಿದ್ದೆ. ಫಿರ್ಯಾದಿಯು, ಸದಾಶಿವ ಶಿಗುಪ್ಪಿ ಬಸವರಾಜ ಬಿರಾದಾರ, ಮಲ್ಲಯ್ಯ ಗಣಾಚಾರಿ ಇವರ ಮೇಲೆ ಪ್ರಕರಣ ದಾಖಲಿಸಿದ್ದರು. ನಾನು ವಿಡಿಯೋವನ್ನು ಫಿರ್ಯಾದಿಗೆ ತಿಳಿಯದಂತೆ ಮಾಡಿಕೊಂಡಿದ್ದೆ. ನಾನು ಸಾಕಷ್ಟು ಬಾರಿ ಫಿರ್ಯಾದಿಯನ್ನು ಚೆಕ್ಕ ಮರಳಿ ನೀಡವಂತೆ ಕೇಳಿದರೂ ಚೆಕ್ಕನ್ನು ಮರಳಿ ನೀಡಿಲಿಲ್ಲ. ಫಿರ್ಯಾದಿ ಒಂದು ಚೆಕ್ಕನ್ನು ರೂ. 7,75,000/– ಹಣಕ್ಕೆ ಮತ್ತು ಇನ್ನೊಂದು ಚೆಕ್ಕನ್ನು ರೂ. 9,84,000/– ಹಣಕ್ಕೆ ಬರೆದುಕೊಂಡಿದ್ದ. ನಾನು ರೂ. 7,75,000/– ಹಣಕ್ಕೆ ಅಥವಾ ರೂ. 9,84,000/– ಹಣಕ್ಕಾಗಲಿ ಚೆಕ್ಕನ್ನು ನೀಡಿಲ್ಲ. ಫಿರ್ಯಾದಿ ಹೆಚ್ಚಿಗೆ ಹಣ ವಸೂಲಿ ಮಾಡುವ ಉದ್ದೇಶದಿಂದ ಈ ರೀತಿ ಬರೆದುಕೊಂಡಿದ್ದ. ನನ್ನದು 3 ಎಕರೆ ಜಮೀನು ಇದೆ ಒಕ್ಕಲತನ

ಮಾಡುತ್ತೇನೆ. ನನಗೆ ಫಿರ್ಯಾದಿ ಕಡೆಯಿಂದ ಹಣ ಪಡೆಯುವ ಪ್ರಸಂಗ ಬಂದಿಲ್ಲ. ಆದ್ದರಿಂದ ಈ ಪ್ರಕರಣದಿಂದ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿ ಕೊಳ್ಳುತ್ತೇನೆ.

ನಾನು ನನ್ನ ಕೇಸನ ಪರವಾಗಿ ಈ ಕೆಳಗಿನ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ.

1) ನನ್ನ ತಾಯಿಯ ಧೃಡಿಕೃತ ಬ್ಯಾಂಕ ಸ್ಟೇಟಮೆಂಟನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

2) ನಾನು ಫೋನ ಪೇ ಮಾಡಿದ ಧೃಡಿಕೃತ ಅಕೌಂಟ ಸ್ಟೇಟಮೆಂಟನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು.

3) ಫಿರ್ಯಾದಿ ಬರೆದುಕೊಟ್ಟ ಧೃಡಿಕೃತ ಒಪ್ಪಿಗೆ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು).

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.